## 23

# “ನಾನೇ ಪುನರುತ್ಥಾನವೂ ಆಗಿದ್ದೇನೆ”

## (11:1-44)

ಯೆರೆಮೀಯನು ಅದನ್ನು ಹೇಗೆ ಮಾಡಿದನೆಂದು ನನಗೆ ತಿಳಿದಿರುವದಿಲ್ಲ! ಹೆಚ್ಚಾಗಿ ಹಳೇ ಒಡಂಬಡಿಕೆಯ ಪ್ರವಾದಿಯು ಪ್ರಸಂಗಿಸಲು ಎದ್ದು ನಿಂತು ಕೊಂಡಾಗ ಪ್ರತಿಯೊಂದು ಸಮಯದಲ್ಲಿ ಅವನ ಸಭೆಯು ಚಿಕ್ಕದಾಗುತ್ತ ಹೋಗುತ್ತಿತ್ತು. ಅವನು ಜೀವಿಸಿದ್ದ ಸಮಯದ ಕಾರಣದಿಂದ, ಅವನು ಪ್ರಸಂಗಿಸಲು ಕರೆಯಲ್ಪಟ್ಟ ಸತ್ಯವು ಹೆಚ್ಚಾಗಿ ಎಲ್ಲಾ ಕೆಟ್ಟ ಸಮಾಚಾರವಾಗಿತ್ತು. ಇಸ್ರಾಯೇಲು ದುಷ್ಟತ್ವದಲ್ಲಿ ಬಹಳ ಆಳವಾಗಿ ಇಳಿದು ಹೋಗಿತ್ತು, ಮತ್ತು ದೇವರು ಅವರನ್ನು ಬಬಿಲೋನಿನಲ್ಲಿ ಸೆರೆಯಾಗಿರಲು ಕಳುಹಿಸುವದನ್ನು ನಿರ್ಣಯಿಸಿಕೊಂಡಿದ್ದನು. ಇಸ್ರಾಯೇಲಿಗೆ ಯೆರೆಮೀಯನ ಸಂದೇಶವು “ಅವರು ತಮ್ಮ ಔಷಧಿಯನ್ನು ತೆಗೆದು ಕೊಳ್ಳಬೇಕು” ಮತ್ತು ತಮ್ಮ ಮೇಲಿನ ತೀರ್ಪನ್ನು ಸಮಾಧಾನದಿಂದ ಸ್ವೀಕರಿಸಿಕೊಳ್ಳಬೇಕೆಂದು ಎಂಬುದಾಗಿತ್ತು. ಅದರ ಪರಿಣಾಮವಾಗಿ, ಜನರು ಅವನನ್ನು ದ್ವೇಷಿಸಿದರು ಮತ್ತು ಅವನು ಸತ್ತು ಹೋಗಬೇಕೆಂದು ಬಯಸಿದರು!

### ಕೆಟ್ಟ ಸಮಾಚಾರ

ಯೋಹಾನ 11ರಿಂದ ಈ ಅಧ್ಯಾಯನವನ್ನು ಪ್ರಾರಂಭಿಸುವುದು ಇಂದು ಪ್ರಸಂಗಿಯನ್ನು ಸ್ವಲ್ಪವಾಗಿ ಯೆರೆಮೀಯನಂತೆ ಭಾವಿಸುವಂತೆ ಮಾಡುತ್ತದೆ. ಈ ವಾಕ್ಯಭಾಗವು ಕೆಲವೊಂದು ಅದ್ಭುತಕರವಾದ ಸಮಾಚಾರವನ್ನು ಒಳಗೊಂಡಿರುವಾಗ, ಮೊದಲು ನಾವು ಎದುರಿಸಲು ಬಯಸದಂಥದ್ದನ್ನು ಎದುರಿಸಬೇಕಾದ ಅಗತ್ಯತೆ ಇರುತ್ತದೆ. ನೋವನ್ನುಂಟು ಮಾಡುವ ಸತ್ಯವು *ನಾವೆಲ್ಲರೂ ಸತ್ತು ಹೋಗುತ್ತೇವೆ* ಎಂಬುದು ಜೀವಿತವು ಪ್ರಾಣಾಂತಿಕವಾದದ್ದಾಗಿದೆ. ಯುವಕರಾಗಿದ್ದರೂ, ಬಲವುಳ್ಳವರಾಗಿದ್ದರೂ ಮತ್ತು ಆರೋಗ್ಯವಂತರಾಗಿದ್ದರೂ ಈ ಕ್ಷಣದಲ್ಲಿ ನಾವು ಒಂದು ದಿನ ಸತ್ತುಹೋಗುವವರಾಗಿದ್ದೇವೆ! ಇಂದೇ ಇರಬಹುದು, ಇಲ್ಲವೇ ನಾಳೆ ಇರಬಹುದು ಇಲ್ಲವೇ ಇಂದಿನಿಂದ ಎಂಭತ್ತು ವರ್ಷಗಳ ಮೇಲಾಗ ಬಹುದು, ಆದರೆ ನಾವು ಎಲ್ಲರೂ ಸತ್ತು ಹೋಗುತ್ತೇವೆ.

ಈ ಭಯಾನಕವಾದ ಸತ್ಯವನ್ನು ಎದುರಿಸುವದನ್ನು ತಪ್ಪಿಸಿಕೊಳ್ಳಲು ನಾವು ಅನೇಕ ಮಾರ್ಗಗಳಲ್ಲಿ ಪ್ರಯತ್ನಿಸುತ್ತೇವೆ. ನಾವು ಸಾಕಷ್ಟು ವ್ಯಾಯಾಮ ಮಾಡಿದರೆ, ಸರಿಯಾದ ಆಹಾರ ಊಟಮಾಡಿದರೆ, ನಮ್ಮ ಸೀಟ್ ಬೆಲ್ಟುಗಳನ್ನು ಧರಿಸಿದರೆ, ಶುದ್ಧೀಕರಿಸಲ್ಪಟ್ಟ ನೀರನ್ನು ಕುಡಿದರೆ ಮತ್ತು ನಾವು ಹೊರಗೆ ಹೋಗುವಾಗ ಸೂರ್ಯಪ್ರಕಾಶದಿಂದ ಕಾಪಾಡಿಕೊಳ್ಳುವಂಥವುಗಳನ್ನು ಹಾಕಿಕೊಂಡರೆ ನಾವು ಮರಣದಿಂದ ತಪ್ಪಿಸಿಕೊಳ್ಳುವೆವು ಎಂದು ನಮ್ಮಲ್ಲಿ ಭರವಸೆ ಹೊಂದಲು ಪ್ರಯತ್ನಿಸುತ್ತೇವೆ. ಅಂತ್ಯದಲ್ಲಿ, ಈ ಜಗತ್ತಿನಲ್ಲಿ ಮರಣದ ಸರಾಸರಿಯು ನೂರಕ್ಕೆ ನೂರರಷ್ಟು ಇರುವಾಗ ಸಂಗತಿಯಿಂದ ಯಾವುದೂ ನಮ್ಮನ್ನು ರಕ್ಷಿಸಲಾರದು!

“ಇದನ್ನು ಕೇಳಲು ಇಂದು ನಾನು ಸಿದ್ಧನಾಗಿರುವದಿಲ್ಲ! ನನಗೆ ಒಂದು ಕಠಿಣವಾದ ವಾರವಿತ್ತು, ಮತ್ತು ನಾನು ಸಾಯುವೆನೆಂದು ಈಗ ನನ್ನ ಜ್ಞಾಪಕಕ್ಕೆ ತರಲ್ಪಟ್ಟಿದೆ” ಎಂದು ಬಹುಶಃ ನೀನು ಯೋಚಿಸುತ್ತಿರ ಬಹುದು. ಅದಕ್ಕೆ ಸುವಾರ್ತೆಯು ಉತ್ತರವನ್ನು ಒದಗಿಸಿರದಿದ್ದರೆ, ಅಂಥ ನೋವಿನ, ನಿರಾಶೆಯ ವಿಷಯವನ್ನು ನಾನು ತರುತ್ತಿರಲಿಲ್ಲ. ಯೇಸುವು ಯೋಹಾನ 11ರಲ್ಲಿಯ

ಆಶ್ಚರ್ಯಕರವಾದ ಕಥೆಯಲ್ಲಿ ಎಲ್ಲಾ ಕಾಲಗಳ ಜನರಿಗೆ, “ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ” ಎಂದು ಘೋಷಿಸುತ್ತಾನೆ. ಇದು ಅದ್ಭುತಕರವಾದ ಸಮಾಚಾರವಾಗಿದೆ, ಆದರೆ ಅದನ್ನು ಮೆಚ್ಚಿಕೊಳ್ಳುವದಕ್ಕಾಗಿ ಮೊದಲು ಕೆಟ್ಟ ಸಮಾಚಾರವನ್ನು ನಾವು ಜ್ಞಾಪಿಸಿಕೊಳ್ಳತಕ್ಕದ್ದು.

ಯೇಸು ಮತ್ತು ಆತನ ಶಿಷ್ಯರು ಯೂದಾಯದಲ್ಲಿಯ ಘರ್ಷಣೆಯನ್ನು ತಪ್ಪಿಸಿಕೊಂಡು ಯೊರ್ದಾನ್ ಹೊಳೆಯನ್ನು ದಾಟಿಕೊಂಡು ಸ್ನಾನಿಕನಾದ ಯೋಹಾನನು ಪ್ರಸಂಗಿಸಿದ ಸ್ಥಳಕ್ಕೆ ಹೋದರು (10:40). ಬೇಥಾನ್ಯದ ಲಾಜರನು ಅಸ್ವಸ್ಥನಾಗಿದ್ದಾನೆಂಬ ಸಮಾಚಾರವು ಬಂದಿತು (11:1). ಲಾಜರ ಹಾಗೂ ಅವನ ಸೋದರಿಯರಾದ ಮರಿಯಳು ಮತ್ತು ಮಾರ್ಥಳು ಯೇಸುವಿನ ಪ್ರೀತಿಯ ಸ್ನೇಹಿತರಾಗಿದುದ್ದರಿಂದ, ಯೇಸುವು ಕೂಡಲೇ ಬೇಥಾನ್ಯಕ್ಕೆ ಹೋಗುವನೆಂದು ಪ್ರತಿಯೊಬ್ಬರು ಬಹುಶಃ ಊಹಿಸಿದ್ದರು. ಆದರೂ ಆ ಸಮಯದಲ್ಲಿ ಆತನಿಗೆ ಮಾತ್ರ ತಿಳಿದಿದ್ದ ಕಾರಣಗಳಿಗಾಗಿ, ಯೇಸುವು ತಾನಿದ್ದಲ್ಲಿಯೇ ಇನ್ನೂ ಎರಡು ದಿನ ಇದ್ದನು. ಅಂತಿಮವಾಗಿ, ಲಾಜರನು ಮರಣ ಹೊಂದಿದನು ಎಂಬುದನ್ನು ತಿಳಿದುಕೊಂಡು, ಯೇಸುವು ತನ್ನ ಶಿಷ್ಯರಿಗೆ, ಹೋಗಿ, ಅಸ್ವಸ್ಥತೆಯಲ್ಲಿರುವ ಸ್ನೇಹಿತ ಲಾಜರನನ್ನು ನೋಡುವ ಸಮಯ ಬಂದಿದೆ ಎಂದು ಹೇಳಿದನು. ಮೊದಲು ಅವರು ಈ ವಿಚಾರವನ್ನು ವಿರೋಧಿಸಿದರು. ಯಾಕಂದರೆ ಅವರು ಯೆರೂಸಲೇಮಿನಲ್ಲಿ ಪುನಃ ಕಂಡು ಕೊಂಡರೆ ಅವರೆಲ್ಲರಿಗೂ ಹಿಂಸೆಯ ಮತ್ತು ಸಾಧ್ಯವಾದರೆ ಮರಣವು ಕಾದಿರುವುದೆಂದು ಬಲ್ಲವರಾಗಿದ್ದರು. ಬೇಥಾನ್ಯವು ಕೇವಲ ಅಲ್ಲಿಂದ ಎರಡು ಮೈಲು ದೂರದಲಿತ್ತು (11:18). ಹೀಗಿರುವಾಗ, ಯೇಸುವು ಅವರಿಗೆ ಲಾಜರನು ಸತ್ತುಹೋಗಿದ್ದಾನೆಂದು ಹೇಳುವಾಗ, ಥೋಮನು, “ಆತನೊಂದಿಗೆ ನಾವು ಸಾಯೋಣ” (11:16) ಎಂದು ಹೇಳಿದಂತೆ, ಅವರು ಮನಸ್ಸಿಲ್ಲದೇ ಹೋಗಲು ಒಪ್ಪಿಕೊಂಡರು.

ಯೇಸುವು ಗ್ರಾಮಕ್ಕೆ ಸಮೀಪಿಸಿದಾಗ, ಆದರೆ ಆತನು ಅದರೊಳಗೆ ಪ್ರವೇಶಿಸುವ ಮೊದಲು (11:30), ಮಾರ್ಥಳು ಆತನು ಬರುತ್ತಿದ್ದಾನೆಂಬುದನ್ನು ಕೇಳಿ, ಆತನನ್ನು ಸಂದರ್ಶಿಸಲು ಓಡಿ ಬಂದಳು. “ಸ್ವಾಮೀ, ನೀನು ಇಲ್ಲಿ ಇರುತ್ತಿದ್ದರೆ ನನ್ನ ತಮ್ಮನು ಸಾಯುತ್ತಿರಲಿಲ್ಲ” (11:21) ಎಂದು ಹೇಳಿದಳು. ಇಡೀ ಮಾನವ ಕುಲವು ಮರಣದ ಎದುರಿನಲ್ಲಿ ಸಹಾಯ ಹೀನತೆಯು ಆಕೆಯ ಭಾವನೆಗಳನ್ನು ವಿವರಿಸಬಹುದು. ಶವ ಸಂಸ್ಕಾರಗಳು ನಮ್ಮ ಅತ್ಯುತ್ತಮ ಪ್ರಯತ್ನಗಳು ಮರಣದ ಜಜ್ಜುವ ಬಲದಿಂದ ನಮ್ಮನ್ನು ರಕ್ಷಿಸಲಾರವು ಎಂಬುದನ್ನು ನಮ್ಮ ಜ್ಞಾಪಕಕ್ಕೆ ತರುವ ಮಾರ್ಗವಾಗಿದೆ.

ಯೇಸುವು ಮಾರ್ಥಳಿಗೆ, “ನಿನ್ನ ತಮ್ಮನು ಎದ್ದು ಬರುವನು” ಎಂದು ಹೇಳಿ ಉತ್ತರ ಕೊಟ್ಟನು (11:23). ಆ ಹೇಳಿಕೆಯು ಆಕೆಗೆ ಹೇಗೆ ಕೇಳಿಸಿತು ಎಂಬುದನ್ನು ತಿಳಿಯಲು ನಮಗೆ ಯಾವುದೇ ಮಾರ್ಗವಿರುವುದಿಲ್ಲ. ಅದು ನೋವಿನದಾಗಿತ್ತೋ? ಶವ ಸಂಸ್ಕಾರದ ಮನೆಯಲ್ಲಿ ನಾವು ಅನೇಕ ಸಲ ಕೇಳುವ ಬರಿದಾದ, ಪೊಳ್ಳಾದ ಮಾತುಗಳಂತೆ ಅದು ಕೇಳಿಸಿತೋ? ಆಕೆಯ ನಂಬಿಕೆಯ ಕೊರತೆಗಾಗಿ ಒಂದು ಗದರಿಕೆಯಂತೆ ಅದು ಕೇಳಿಸಿತೋ? ಯೇಸುವಿನ ಮಾತುಗಳಿಗೆ ಆಕೆಯ ಮೊದಲ ಪ್ರತಿಕ್ರಿಯೆ ಏನೇ ಆಗಿದ್ದರೂ, ಮಾರ್ಥಳು ಅವುಗಳನ್ನು ಆತ್ಮೀಕರಿಸಿ, “ಸತ್ತವರಿಗೆ ಕಡೇ ದಿನದಲ್ಲಿ ಪುನರುತ್ಥಾನವಾಗುವಾಗ ಅವನೂ ಎದ್ದು ಬರುವನೆಂದು ನಾನು ಬಲ್ಲೆನು” ಎಂದು ಉತ್ತರ ಕೊಟ್ಟಳು (11:24).

## ಶುಭ ಸಮಾಚಾರ

ಈ ಹಿನ್ನೆಲೆಯಲ್ಲಿ ಯೇಸುವು ತನ್ನ ಇಡೀ ಸೇವಾಕಾಲದ ಜಗತ್ತನ್ನು ಅತಿಯಾಗಿ ಬದಲಾಯಿಸುವ ಕೆಲವು ಮಾತುಗಳನ್ನು ಹೇಳಿದನು. ಆತನು ಮಾರ್ಥಳಿಗೆ, “ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ; ನನ್ನನ್ನು ನಂಬುವವನು ಸತ್ತರೂ ಬದುಕುವನು; ಮತ್ತು ಬದುಕುತ್ತಾ ನನ್ನನ್ನು ನಂಬುವ ಪ್ರತಿಯೊಬ್ಬನು ಎಂದಿಗೂ ಸಾಯುವದಿಲ್ಲ” (11:25,

26ಎ) ಎಂದು ಹೇಳಿದನು. ಯೇಸುವು ಏನನ್ನು ಹೇಳಲಿಲ್ಲ ಎಂಬುದನ್ನು ಗಮನಿಸುವುದು ಈ ಹಂತದಲ್ಲಿ ಮಹತ್ವದ್ದಾಗಿದೆ: "ನಾನು ಲಾಜರನನ್ನು ಎಬ್ಬಿಸುವೆನು" ಎಂದು ಆತನು ಹೇಳ ಲಿಲ್ಲ. "ನಾನೇ ಪುನರುತ್ಥಾನವನ್ನು ಅನುಭವಿಸುವೆನು" ಎಂದೂ ಆತನು ಹೇಳಲಿಲ್ಲ. "ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ" ಎಂದು ಆತನು ಘೋಷಿಸಿದಾಗ, ಆತನು ಇವುಗಳಿಗಿಂತ ಎಷ್ಟೋ ಹೆಚ್ಚಾದ ವಿಚಾರಗಳನ್ನು ವ್ಯಕ್ತಪಡಿಸಿದನು. ಇಲ್ಲಿ ನಾವು ಯೋಹಾನನ ಸುವಾರ್ತೆಯಲ್ಲಿ "ನಾನು ಆಗಿದ್ದೇನೆ" ಎಂಬ ಇನ್ನೊಂದು ಹೇಳಿಕೆಯನ್ನು ನಾವು ನೋಡುತ್ತೇವೆ: ಯೇಸುವು ದೈವತ್ವಕ್ಕೆ ಇನ್ನೊಂದು ಹೇಳಿಕೆಯನ್ನು ಕೊಡುತ್ತಿದ್ದಾನೆ; ಅದೇ ಸಮಯದಲ್ಲಿ ಆ ದೊಡ್ಡ ವೈರಿ, ಮರಣಕ್ಕೆ ತನ್ನ ಸಂಭಂಧವನ್ನು ನಿರೂಪಿಸುತ್ತಿದ್ದಾನೆ.

ತನ್ನನ್ನು ಪುನರುತ್ಥಾನದಂತೆ ಘೋಷಿಸುವರಿಂದ, ಯೇಸುವು ತನ್ನ ಹಿಂಬಾಲಕರು ಎಂದಿಗೂ ದೈಹಿಕ ಮರಣವನ್ನು ಹೊಂದುವದಿಲ್ಲ, ಇಲ್ಲವೇ ತಾನು ಎಂದು ಮರಣವನ್ನು ಎದುರಿಸುವದಿಲ್ಲ ಎಂದು ವಾಗ್ದಾನ ಮಾಡುತ್ತಿರುವದಿಲ್ಲ. ಅದರ ಬದಲು, ತಾನು ಸತ್ತು ಪುನಃ ಎದ್ದು ಬರುವದರಿಂದ, ಮರಣದ ಬಲವನ್ನು ಮುರಿಯುವದರಿಂದ, ಆತನ ಹಿಂಬಾಲಕರು ಎಂದು ಪುನಃ ಮರಣದೊಂದಿಗೆ ಅದೇ ರೀತಿಯ ಸಂಬಂಧದಲ್ಲಿ ಇರುವದಿಲ್ಲ ಎಂದು ಆತನು ಹೇಳಿದನು. ಅವರಿಗೆ ಪುನರುತ್ಥಾನವು ಅದ್ಭುತಕರವಾದ, ಒಂದು ಸಮಯದ ಘಟನೆಗಿಂತ ಹೆಚ್ಚಾಗಿರುವುದು; ಅದು ಜೀವದ ಬಗ್ಗೆ ಒಂದು ನೂತನ ವಾಸ್ತವಿಕತೆಯಾಗುವುದು!

ಮಾರ್ಥಳ ಮುಂದಿನ ಮಾತುಗಳು ಅದ್ಭುತಕರವಾದ ನಂಬಿಕೆಯನ್ನು ಆತ್ಮಿಕ ಸಂಗತಿಗಳ ಆಳವಾದ ತಿಳುವಳಿಕೆಯನ್ನೂ ಪ್ರತಿಬಿಂಬಿಸುವವು. ಯೇಸುವು ಆಕೆಗೆ ಆಕೆ ತನ್ನನ್ನು ನಂಬುವಳೋ ಎಂದು ಕೇಳಿದಾಗ, ಆಕೆ "ಹೌದು ಸ್ವಾಮೀ, ಲೋಕಕ್ಕೆ ಬರಬೇಕಾದ ದೇವಕುಮರನಾದ ಕ್ರಿಸ್ತನು ನೀನೇ ಎಂದು ನಂಬಿದ್ದೇನೆ" (11:27) ಎಂದು ಉತ್ತರ ಕೊಟ್ಟಳು. ಸಂಭವಿಸಲಿಕ್ಕಿದ್ದ ಆಶ್ಚರ್ಯಕರವಾದ ಅದ್ಭುತಕಾರ್ಯವನ್ನು ನೋಡುವದಕ್ಕಿಂತ ಮೊದಲೇ, ಮಾರ್ಥಳು ಯೋಹಾನನ ಸುವಾರ್ತೆಯು ಹುಟ್ಟಿಸಲು ಬರೆಯಲ್ಪಟ್ಟ ವಿಶ್ವಾಸದ ರೀತಿಯನ್ನು ಪ್ರದರ್ಶಿಸಿದಳು![1]

ಯೇಸುವಿನೊಂದಿಗೆ ಮಾರ್ಥಳ ಸಂದರ್ಶನದ ನಂತರ ಆಕೆ ಕರ್ತನು, ಬಂದದ್ದರ ಬಗ್ಗೆ ತನ್ನ ಸಹೋದರಿಗೆ ತಿಳಿಸಲು ತನ್ನ ಮನೆಗೆ ಹಿಂದಿರುಗಿದಳು. ಯೇಸುವು ಸಮೀಪ ದಲ್ಲಿದ್ದಾನೆಂದು ಕೇಳಿ, ಮರಿಯಳು ಆತನನ್ನು ನೋಡಲು ಅವಸರದಿಂದ ಹೋದಳು. ಆಕೆ ಯೇಸುವನ್ನು ಸಂದರ್ಶಿಸಿದಾಗ, ಆಕೆ ಆತನ ಪಾದಕ್ಕೆ ಬಿದ್ದು, ತನ್ನ ಸಹೋದರಿಯ ನೋವಿನ ಮಾತುಗಳನ್ನು ಪುನಃ ಹೇಳಿದಳು: "ಸ್ವಾಮೀ, ನೀನು ಇಲ್ಲಿ ಇರುತ್ತಿದ್ದರೆ ನನ್ನ ತಮ್ಮನು ಸಾಯುತ್ತಿರಲಿಲ್ಲ" (11:32). ಆ ಸಮಯದಲ್ಲಿ ಮರಿಯಳು ಅನುಭವಿಸಿದಂಥ ನೋವನ್ನು, ದುಃಖವನ್ನೂ, ವೇದನೆಯನ್ನೂ ಮತ್ತು ನಿರಾಶೆಯನ್ನು ನಾವೆಲ್ಲರೂ ಅನುಭವಿಸಿದ್ದೇವೆ. ಅದರ ಪರಿಣಾಮವಾಗಿ, ನಾವೆಲ್ಲರೂ ಯೇಸವಿನೊಂದಿಗೆ ಲಾಜರನ ಸಮಾಧಿಗೆ ಹೋಗಲು ಸಿದ್ಧರಾ ಗಿದ್ದೇವೆ.

ಆ ದಿನ ಯೇಸುವು ನೋಡಿದ್ದ ಎಲ್ಲದರ ಕಾರಣದಿಂದ ಆತನು "ಆತ್ಮದಲ್ಲಿ ನೊಂದು ಕೊಂಡು ಕತ್ತರಿಸಿದನು" (11:33). ಲಾಜರನು ಎಲ್ಲಿ ಹೂಣಲ್ಪಟ್ಟಿದ್ದಾನೆ, ಎಂದು ಆತನು ಕೇಳಿ ದನು. ಅವರು ಸಮಾಧಿಯ ಕಡೆಗೆ ಹೋಗುತ್ತಿದ್ದಾಗ, ಯೇಸುವು ಗೋಳಾಡುತ್ತಿದ್ದ ಇತರ ರೊಂದಿಗೆ ತನ್ನ ಕಣ್ಣೀರು ಸುರಿಸಿದನು ಮತ್ತು ಕಾಣುವಂತೆ ಅತ್ತನು (11:35). ಪಕ್ಕದಲ್ಲಿದ್ದವರು, "ಆಹಾ, ಈತನು ಅವನ ಮೇಲೆ ಎಷ್ಟೋ ಮಮತೆ ಇಟ್ಟಿದ್ದನು!" ಎಂದು ಆಶ್ಚರ್ಯಪಟ್ಟರು (11:36).

ಲಾಜರನು ಸಮಾಧಿಯು ನಿಜವಾಗಿಯೂ ಒಂದು ಗವಿಯಾಗಿತ್ತು, ಅದರ ಬಾಯಿಗೆ ಒಂದು ದೊಡ್ಡ ಕಲ್ಲು ಆನಿಸಿತು (11:38). ಆ ಕಲ್ಲನ್ನು ತೆಗೆದು ಹಾಕಿರಿ ಎಂದು ಅವರಿಗೆ ಯೇಸು ಹೇಳಿದಾಗ, ಲಾಜರನು ಹೂಣಲ್ಪಟ್ಟ ನಾಲ್ಕು ದಿನಗಳಾಗಿದೆ, ಈಗ ಕೊಳೆಯುತ್ತಿರುವ

ದೇಹದಿಂದ ದುರ್ವಾಸನೆ ಬರುತ್ತದೆ ಎಂದು ಹೇಳಿ ಅಡ್ಡಿಪಡಿಸಿದಳು. ತನ್ನನ್ನು ನಂಬ ಬೇಕೆಂದು ಯೇಸುವು ಹೇಳಿದನು. ಮತ್ತು ಕಲ್ಲು ತೆಗೆದು ಹಾಕಲ್ಪಟ್ಟಿತು (11:39-41).

ಯೋಹಾನನ ಸುವಾರ್ತೆಯಲ್ಲಿ ದಾಖಲೆಯಾದ ಎಲ್ಲಾ "ಸೂಚಕ ಕಾರ್ಯಗಳಲ್ಲಿ" ಲಾಜರನ ಸಮಾಧಿಯ ಬಳಿಯಲ್ಲಿ ಸಂಭವಿಸಿದ್ದಕ್ಕಿಂತ ಹೆಚ್ಚು ದೊಡ್ಡದು ಯಾವುದೂ ಇರುವದಿಲ್ಲ. 11ನೆಯ ಅಧ್ಯಾಯದಲ್ಲಿ ಯೇಸುವು ಈ ಸಂಗತಿಗಳು, ಜನರು "ದೇವರ ಮಹಿಮೆಯನ್ನು" (11:4, 15, 40) ನೋಡಲಿಕ್ಕಾಗುವಂತೆ ಸಂಭವಿಸಿದವೆಂದು ಮೂರು ಸಲ ಹೇಳಿದ್ದಾನೆ. ಮಾರ್ಗದ ಪ್ರತಿಯೊಂದು ಹೆಜ್ಜೆಯಲ್ಲಿ ಯೇಸುವಿನ ಬೋಧನೆಗಳಲ್ಲಿಯೂ ಅದ್ಭುತ ಕಾರ್ಯಗಳಲ್ಲಿಯೂ ನಾವು ದೇವರ ಮಹಿಮೆಯನ್ನು ನೋಡಿದ್ದೇವೆ; ಆದರೆ ಯೋಹಾನನ ಸುವಾರ್ತೆಯಲ್ಲಿ ಈ ಹಂತದ ವರೆಗೆ ಲಾಜರನನ್ನು ಎಬ್ಬಿಸಿದ್ದರಲ್ಲಿ ದೇವರ ಮಹಿಮೆಯು - ಕ್ರಿಸ್ತನಲ್ಲಿ ದೇವರ ಪ್ರಸನ್ನತೆಯು - ಹೆಚ್ಚು ಪ್ರಕಾಶಮಾನವಾಗಿ ಹೊಳೆಯುತ್ತದೆ. ಬೆಳಕನ್ನು ಪ್ರಕಾಶಮಾನವಾಗಿ ಇಲ್ಲವೇ ಮೊಬ್ಬಾಗಿ ಮಾಡಲು ಶಕ್ತವಾಗಿರುವ ಸ್ವಿಚ್ಚಿನಿಂದ ಇರುವ ದೀಪದ ಬದಿಯಲ್ಲಿ ಈ ಸವಾರ್ತೆಯನ್ನು ನಾವು ಓದುತ್ತಿರುವೆವೋ ಎಂಬಂತಿದೆ. ಯೋಹಾನನಲ್ಲಿ ನಾವು ಇನ್ನೂ ಮುಂದೆ ಹೋಗುವಾಗ, ಬೆಳಕು ಇನ್ನೂ ಹೆಚ್ಚು ಪ್ರಕಾಶಮಾನವಾದದ್ದಾಗುತ್ತದೆ. ನಾವು 11ನೆಯ ಅಧ್ಯಾಯವನ್ನು ತಲುಪುವಾಗ, ಬೆಳಕು ಕುರುಡರನ್ನಾಗಿ ಮಾಡುವಷ್ಟಾಗುತ್ತದೆ. ಈಗಾಗಲೇ ನಾವು ಅನೇಕ ವಿಧಗಳಲ್ಲಿ ದೇವರ ಮಹಿಮೆಯನ್ನು ನೋಡಿದ್ದೇವೆ; ಮುಂದಿನ ಕೆಲವು ವಚನಗಳಲ್ಲಿ ಅದನ್ನು ಹೆಚ್ಚು ಬಲವುಳ್ಳದ್ದನ್ನಾಗಿ ನೋಡುತ್ತೇವೆ.

ಆಘಾತಕ್ಕೊಳಗಾದ ಶೋಕಿಸುವವರು ಲಾಜರನ ಸಮಾಧಿಯ ಹೊರಗೆ ನಿಂತಿರುವಂತೆ ಮತ್ತು ಬಾಗಿಲಿನಿಂದ ಬಂಡೆಯು ತೆಗೆದು ಹಾಕಲ್ಪಡುವದನ್ನು ಗಮನಿಸುತ್ತಿದ್ದಂತೆ, ಯೇಸುವು ತನ್ನ ಕಣ್ಣುಗಳನ್ನು ಮೇಲಕ್ಕೆತ್ತಿ, ಪ್ರಾರ್ಥಿಸುವದನ್ನು ನೋಡಿದರು (11:41, 42). ಆತನು ತನ್ನ ಪ್ರಾರ್ಥನೆಯನ್ನು ಮುಗಿಸಿದಾಗ, ಯೇಸುವು, "ಲಾಜರನೇ, ಹೊರಗೆ ಬಾ" (11:43) ಎಂದು ಕೂಗಿದನು. ಗವಿಯ ಬಾಗಿಲನ್ನು ಪ್ರತಿಯೊಬ್ಬರು ಗಮನಿಸುತ್ತಿದ್ದಾಗ ಮೌನವು ಆವರಿಸಿತ್ತು. ಏನೂ ಸಂಭವಿಸದಿದ್ದರೆ, ತಾವು ಒಬ್ಬ ಹುಚ್ಚನ ಸನ್ನಿಧಿಯಲ್ಲಿದ್ದೇವೆಂದು ತಿಳಿಯುತ್ತಿದ್ದರು: ಆದರೆ ಲಾಜರನು ಗವಿಯಿಂದ ಹೊರಗೆ ಬಂದರೆ, ಅವರು ತಾವು ಎಂದಾದರು ಕಂಡಿದದ್ದಕ್ಕಿಂತ ಹೆಚ್ಚು ಬಲವನ್ನು ಹೊಂದಿಕೊಂಡಿದ್ದಾತನ ಸನ್ನಿಧಿಯಲ್ಲಿ ತಾವಿದ್ದೇವೆಂದು ಅವರು ತಿಳಿದುಕೊಳ್ಳುತ್ತಿದ್ದರು.

"ಸತ್ತು ಹೋಗಿದ್ದ" ಲಾಜರನು (11:44) ಗವಿಯಿಂದ ಹೊರಗೆ ನಡೆದು ಬಂದನು, ಅವನ ದೇಹವು ಹೂಣಿಡಲ್ಪಟ್ಟಾಗ ಸುತ್ತಿದ್ದ ಬಟ್ಟೆಗಳೊಂದಿಗೆ ಬಂದನು. ಸಮೀಪದಲ್ಲಿದ್ದವರಿಗೆ ಯೇಸುವು, "ಅವನನ್ನು ಬಿಚ್ಚಿರಿ, ಹೋಗಲಿ" (11:44) ಎಂದು ಹೇಳಿದನು. ಲಾಜರನು ಜೀವಿತನಾದನು, ಯೇಸುವು ತಾವು ಏನಾಗಿದ್ದೇನೆಂದು ಹೇಳಿಕೊಂಡಿದ್ದನೋ ಅದೆಲ್ಲವನ್ನು ಪುನಃ ಪ್ರದರ್ಶಿಸಿದನು. ಮತ್ತು ದೇವರ ಮಹಿಮೆಯು ಪ್ರಕಾಶಮಾನವಾಗಿ ಹೊಳೆಯಿತು. ಪರಿಣಾಮವು, ಈ ಘಟನೆಗಳನ್ನು ನೋಡಿದ ಅನೇಕರು ಆ ದಿನ ಯೇಸುವಿನಲ್ಲಿ ನಂಬಿಕೆಯಿಟ್ಟರು ಎಂದು ನಾವು ನಿರೀಕ್ಷಿಸುತ್ತೇವೆ (11:45).

## ಶುಭ ಸಮಾಚಾರ ಮತ್ತು ನಾವು

ಲಾಜರನ ಸಮಾಧಿಯ ಬಳಿಯಲ್ಲಿಯ ಯೇಸುವಿನ ಕಥೆಯು ಮರಣದ ಬಗೆಗಿರುವ ನಮ್ಮ ಸ್ವಂತ ಭಯಗಳನ್ನು ಎದುರಿಸಲು ನಮಗೆ ಸಹಾಯ ಮಾಡುತ್ತದೆ. ಆಗ ಯೇಸುವು ಮಾಡಿದ್ದರ ಹಾಗೂ ಇನ್ನೂ ಇಂದು ಮಾಡುತ್ತಿರುವಂಥದ್ದರ ಕಾರಣದಿಂದ, ಈ ಜೀವನದಲ್ಲಿ ಸಂತೋಷ ದಿಂದ ಇರುವದಕ್ಕಾಗಿ ಮರಣದ ವಾಸ್ತವಿಕತೆಯನ್ನು ನಾವು ಅಲ್ಲಗಳೆಯ ಬೇಕಾಗಿರುವದಿಲ್ಲ. ಕ್ರೈಸ್ತರಾಗಿ ನಾವು ಮರಣದಿಂದ ಓಡಿಹೋಗುವದಿಲ್ಲ; ನಾವು ಅದನ್ನು ಎದುರಿಸುತ್ತೇವೆ. ಅದು ನಮಗೆ ಸಂಭವಿಸುವದಿಲ್ಲ ಎಂದು ನಟಿಸುವದಿಲ್ಲ; ಅದಕ್ಕೆ ನಮಗೆ ಉತ್ತರ ಇದೆಯೆಂದು

ನಾವು ಜಗತ್ತಿಗೆ ಘೋಷಿಸುತ್ತೇವೆ. ಈ ಹೊಸ ಮನೋಭಾವನೆಯು ಪೌಲನ ಬರಹಗಳಿಂದ ಈ ಕೆಳಗಿನ ಉದಾಹರಣೆಗಳಲ್ಲಿ ಕಂಡು ಬರುತ್ತದೆ:

> ಹೇಗಂದರೆ *ಮರಣವಾಗಲಿ ಜೀವವಾಗಲಿ* ದೇವದೂತರಾಗಲಿ ದುರಾತ್ಮಗಳಾ ಗಲಿ ಈಗಿನ ಸಂಗತಿಗಳಾಗಲಿ ಮುಂದಣ ಸಂಗತಿಗಳಾಗಲಿ ಮಹತ್ವಗಳಾಗಲಿ ಮೇಲಣ ಲೋಕ ವಾಗಲಿ ಕೆಳಗಣ ಲೋಕವಾಗಲಿ ಬೇರೆ ಯಾವ ಸೃಷ್ಟಿಯಾಗಲಿ ನಮ್ಮನ್ನು ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿ ತೋರಿಬಂದ ದೇವರ ಪ್ರೀತಿಯಿಂದ ಅಗಲಿಸಲಾರವೆಂದು ನನಗೆ ನಿಶ್ಚಯ ಉಂಟು (ರೋಮಾಪುರ 8:38, 39; ಒತ್ತಿ ಹೇಳಿದ್ದು ನನ್ನದು).

> ಲಯವಾಗುವ ಈ ದೇಹವು ನಿರ್ಲಯತ್ವವನ್ನು ಧರಿಸಕೊಂಡಾಗ ಮರಣಾಧೀನ ವಾಗಿರುವ ಈ ದೇಹವು ಅಮರತ್ವವನ್ನು ಧರಿಸಿಕೊಂಡಾಗ ಬರೆದಿರುವ ಮಾತು ನೆರವೇರುವದು. *"ಆ ಮಾತು ಏನಂದರೆ - ಮರಣವು ನುಂಗಿಯೇ ಹೋಯಿತು, ಜಯವಾಯಿತು ಎಂಬದೇ ಮರಣವೇ, ನಿನ್ನ ಜಯವೆಲ್ಲಿ? ಮರಣವೇ, ನಿನ್ನ ವಿಷದ ಕೊಂಡಿ ಎಲ್ಲಿ?"* (1 ಕೊರಿಂಥ 15:54, 55; ಒತ್ತಿ ಹೇಳಿದ್ದು ನನ್ನದು).

ಮರಣವು ಜೀವನದ ವಾಸ್ತವಿಕತೆಯಾಗಿದೆ. ಮರಣಕ್ಕೆ ಕ್ರೈಸ್ತತ್ವದಲ್ಲಿ ಉತ್ತರವಿರುವದಕ್ಕಾಗಿ ನಾವು ಉಪಕೃತರಾಗಿದ್ದೇವೆ. ಯೇಸುವು ಪುನರುತ್ಥಾನವೂ ಜೀವವೂ ಆಗಿರುವನೆಂಬ ತಿಳುವಳಿಕೆಯು "ನಿಜವಾದ ಜಗತ್ತಿನಲ್ಲಿ" ನಮಗೆ ಸಮಾಧಾನವೂ ಆನಂದವೂ ಇರುವಂತೆ ಇಡುತ್ತದೆ. ಮರಣದ ನಮ್ಮ ಭಯವನ್ನು ಮೊದಲು ನಾವು ಎದುರಿಸುವದರಿಂದ ಮಾತ್ರವೇ, ನಮಗೆ ಈ ಜೀವನದಲ್ಲಿ ನಿಜವಾದ ಸಂತೋಷವಿರುತ್ತದೆ.

ಹದಿನೇಳನೆಯ ಶತಮಾನ ಕವಿ ಮತ್ತು ಪ್ರಸಂಗಿಯಾದ ಜೊನ್ ಡೊನ್ನೆ ಎಂಬವನು, ಜೀವನ ಮತ್ತು ಮರಣದ ಅತಿ ದೊಡ್ಡ ವಿಷಯಗಳ ಬಗ್ಗೆ ತನ್ನ ಮನಸ್ಸನ್ನು ಮತ್ತು ಪ್ರಾಣವನ್ನು ಶಿಕ್ಷಿಸುವದಕ್ಕಾಗಿ ಒಂದು ಸಮಯ ಶವ ಪೆಟ್ಟಿಗೆಯಲ್ಲಿ ಮಲಗುವುದನ್ನು ಆಯ್ದು ಕೊಂಡನು, ಸ್ವಲ್ಪ ವರ್ಷಗಳ ಹಿಂದೆ ಅಂಥದೇ ಒಂದು ಅನುಭವ ನನಗಾಯಿತು. ಸತತವಾದ ಗದ್ದಲದಿಂದ ಮತ್ತು ನನ್ನ ಆಫೀಸಿನ, ಸುತ್ತಲಿನ ಸತತವಾದ ಚಟುವಟಿಕೆಗಳ ಕಾರಣದಿಂದ ಅಧ್ಯಯನಕ್ಕಾಗಿ ಮತ್ತು ಪ್ರಾರ್ಥನೆಗಾಗಿ ಸಾಕಷ್ಟು ಸಮಯವನ್ನು ಪಡೆಯಲು ಅಶಕ್ತನಾದೆನು. ಒಂದು ಸ್ಥಳಿಕ ಫುನೆರಲ್ ಹೋಮನ್ನು ನಡಿಸುತ್ತಿದ್ದ ನನ್ನ ಒಬ್ಬ ಒಳ್ಳೆ ಸ್ನೇಹಿತನಿಗೆ ನನ್ನ ಸಮಸ್ಯೆಯನ್ನು ಹೇಳಿದನು: ಸ್ವಲ್ಪ ಸಮಯದ ನಂತರ ಅವನು ನನ್ನ ಸಮಸ್ಯೆಗೆ ಪರಿಹಾರವದೆಯೆಂದು ಹೇಳಿದನು. ಅವನು ನನ್ನನ್ನು ಫುನೆರಲ್ ಹೇಮಿನ ಎರಡನೆಯ ಅಂತಸ್ತಿಗೆ ಕರೆದು ಕೊಂಡು ಹೋಗಿ ಅಲ್ಲಿ ನನಗಾಗಿ ಕಟ್ಟಿದ ಒಂದು ಚಿಕ್ಕ ಕೋಣೆಯನ್ನು ತೋರಿಸಿದಾಗ ನನಗಾದ ಆಶ್ಚರ್ಯದ ಬಗ್ಗೆ ಊಹಿಸಿರಿ. ಅವನು ಶವ ಪೆಟ್ಟಿಗೆಗಳನ್ನು ಸಂಗ್ರಹಿಸಿಡುತ್ತಿದ್ದ ಮನೆಯ ಹಿಂದಿನ ಮೂಲೆಯಲ್ಲಿ ಇತ್ತು. ಅದು ಎಂದಾದರೂ ಕೊಡಲ್ಪಟ್ಟದ್ದಕ್ಕಿಂತ ಹೆಚ್ಚು ಆಶ್ಚರ್ಯಕರ ವಾದ ಕಾಣಿಕೆಯಾಗಿತ್ತು. ಅದು ಎಲ್ಲವುಗಳಿಂದ ದೂರ ಹೋಗಿ, ಅಧ್ಯಯನ ಮಾಡುವ, ಯೋಚಿಸುವ ಮತ್ತು ಪ್ರಾರ್ಥಿಸುವ ಸ್ಥಳವಾಯಿತು. (ಶವ ಪೆಟ್ಟಿಗೆಗಳನ್ನು ಸಂಗ್ರಹಿಸಿ ಇಡುವ ಮನೆಯಲ್ಲಿ ಯಾರೂ ತೊಂದರೆ ಪಡಿಸಲು ಹೋಗುವದಿಲ್ಲ) ಆ ಸಮಯದಿಂದ ಎಲ್ಲಾ ಪ್ರಸಂಗಗಳು ಫುನೆಕಲ್ ಮನೆಯಲ್ಲಿ, ಜೀವನದ ಅತೀ ಕಠಿಣವಾದ ವಾಸ್ತವಿಕತೆಯ ನೆರಳಿನಲ್ಲಿ ಬರೆಯಲ್ಪಡ ಬೇಕೆಂದು ಆಶ್ಚರ್ಯಪಟ್ಟೆನು. ಸುಗಂಧ ತುಂಬಿಸುವ ಕೋಣೆಯನ್ನು ದಾಟಿ, ಶವ ಪೆಟ್ಟಿಗೆಗಳಿಂದ ತುಂಬಿದ ಕೋಣೆಯ ಮುಖಾಂತರ ನಡೆಯುವುದು ನನ್ನ ಮುಖ್ಯಸೇವೆಯು ಹೆಚ್ಚು ಸುಖಕರ ವಾದ ಜೀವಿತಗಳನ್ನು ನಡಿಸಲು ಜನರಿಗೆ ಸಹಾಯ ಮಾಡುವಲ್ಲಿ ಆದರೆ ನಿಜವಾದ ಜೀವಿ ತವನ್ನು ಕಂಡುಕೊಳ್ಳಲು ಜನರಿಗೆ ಸಹಾಯ ಮಾಡುವದಾಗಿದೆ. ಅವರ ಹೃದಯಗಳಿಂದ ಎಲ್ಲಾ ದುಃಖವನ್ನು ತೆಗೆದು ಹಾಕುವಲ್ಲಿ ಆದರೆ ದುಃಖದ ಮಾರ್ಗದಾಟಿಸಿ ಪುನರುತ್ಥಾನಕ್ಕೆ ನಡಿಸುವುದಾಗಿದೆ.

ಜಗತ್ತಿನ ಒತ್ತಡಗಳನ್ನೂ ನೋವುಗಳನ್ನೂ ಎದುರಿಸಲು ಸಹಾಯ ಮಾಡುವದಲ್ಲ; ಅದು ಅವರು ತಮ್ಮ ದೇವರನ್ನು ಸಂಧಿಸುವಂತೆ ಸಿದ್ಧಪಡಿಸುವುದಾಗಿದೆ (ಆಮೋಸ 4:12).

## ಮುಕ್ತಾಯ

ಸಂದೇಹದಿಂದ ತುಂಬಿದ ಪುಸ್ತಕವನ್ನು ನೀವು ಎಂದಾದರು ಓದಿರುವಿರೋ ಇಲ್ಲವೇ ಸಂದೇಹದಿಂದ ತುಂಬಿದ ಚಲನ ಚಿತ್ರವು ನಿಮ್ಮನ್ನು ಭಯಪಡಿಸಿದ್ದನ್ನು ಮತ್ತು ಹೆದರಿಕೊಂಡದ್ದನ್ನು ನೀವು ನೋಡಿರುವಿರೋ? ಅದೇ ಪುಸ್ತಕವನ್ನು ಪುನಃ ಓದಿರುವಿರೋ ಇಲ್ಲವೇ ಅದೇ ಚಲನ ಚಿತ್ರಗಳನ್ನು ಪುನಃ ನೋಡಿರುವಿರೋ? ಎರಡನೆಯ ಸಲ ಆರಾಮವಾಗಿರುವೆನು ಮತ್ತು ನಾಯಕನು ತೊಂದರೆಗಳನ್ನು ಗಂಡಾಂತರಗಳನ್ನು ಎದುರಿಸುವನ್ನು ಭಿನ್ನವಾದ ರೀತಿಯಲ್ಲಿ ಪ್ರತಿಯೊಂದು ಚೆನ್ನಾಗಿ ಅಂತ್ಯಗೊಳ್ಳುವದೆಂಬ ಭರವಸೆಯಿಂದ ನೋಡುವೆನು.

ಬೇಥಾನ್ಯದ ಸಮೀಪದಲ್ಲಿಯ ಗವಿಯೊಳಗಿಂದ ಲಾಜರನು ಹೊರಗೆ ನಡೆದು ಬಂದಾಗ, ನಮ್ಮ ಕಥೆಗಳು ಹೇಗೆ ಮುಕ್ತಾಯಗೊಳ್ಳುವವೆಂದು ತೋರಿಸಿದನು. ಕರ್ತನು ಬೇಗನೇ ಹಿಂದಿರುಗಿ ಬರದಿದ್ದರೆ, ನಾವೆಲ್ಲರೂ ಮರಣವನ್ನು ಎದುರಿಸುವುದು ಸತ್ಯವಾಗಿದೆ. ಹೀಗಿದ್ದರೂ, ಯೇಸುವು ಪುನರುತ್ಥಾನವೂ ಜೀವವೂ ಆಗಿರುವದರಿಂದ, ನಾವು ಮರಣವನ್ನು ಭಿನ್ನವಾದ ರೀತಿಯಲ್ಲಿ ದೃಷ್ಟಿಸುತ್ತೇವೆ. ನಮ್ಮ ದೇಹಗಳು ಒಂದು ದಿನ ಸಮಾಧಿಗಳಲ್ಲಿ ಇಡಲ್ಪಟ್ಟರೂ, ಒಂದು ದಿನ ನಾವು ಆ ಸಮಾಧಿಗಳಿಂದ ಎದ್ದು ಬರುವೆವು. ಯೇಸುವು ಮರಣದ ಸಮಸ್ಯೆಗೆ ಉತ್ತರವಾಗಿರುವನೆಂದು ನಾವು ನಂಬು ವಾಗ, ಆಗ ಮತ್ತು ಆಗ ಮಾತ್ರವೇ ನಾವು ನಿಜವಾಗಿಯೂ ಜೀವಿಸಲು ಸಿದ್ಧರಾಗಿರುವೆವು!

---

ಟಿಪ್ಪಣಿ

[1]ಮಾರ್ಥಳ ಅರಿಕೆಗೆ ಬದಿಯ ಟಿಪ್ಪಣಿಯಂತೆ, ಲೆಯಾನ್ ಮೊರ್ರಿಸನು (*The New International Commentary on the New Testament* [Grand Rapids, Mich.: Baker Book House, 1986], 551) ಮಾರ್ಥಳು ತನ್ನ ಗಮನೀಯವಾದ ಅರಿಕೆಗಿಂತ ಹೆಚ್ಚಾಗಿ ತನ್ನ ಕಾರ್ಯನಿರತತೆಗೆ ಅತೀ ಹೆಚ್ಚು ಪ್ರಸಿದ್ಧಳಾಗಿದ್ದದ್ದು ಹೇಗೆ ನಿರ್ಭಾಗ್ಯವಾದದ್ದಾಗಿದೆಎಂಬುದನ್ನು ಗಮನಿಸಿದ್ದಾನೆ (ಲೂಕ 10:41).